

ಚಿತ್ರ ಹೇಮಂತ

# ಪುಟಾಣಿಗಳು ಮತ್ತು ಗಿಳಿ ಮರಿ

■ **ಅನೀಶ್ ಬಿ. ಕೊಪ್ಪ**

ಅಂದು ಭಾನುವಾರ. ರಜಾ ದಿನ. ಆ ದಿನ ಬೆಳಗ್ಗೆ ಚಂದನ್ ಮತ್ತು ಚಂದ್ರಿಕಾ ಅಪ್ಪನೊಂದಿಗೆ ತೋಟದತ್ತ ಹೆಜ್ಜೆಯನಿಟ್ಟರು. ಮುಂಜಾವಿನಲ್ಲಿ ಹಕ್ಕಿಗಳ ಚಿಲಿಪಿಲಿ ಕಲರವವನ್ನು ಕೇಳುತ್ತಾ, ತೋಟದಲ್ಲಿನ ತಂಪಾದ ಗಾಳಿಯನ್ನು ಸವಿಯುತ್ತಾ, ಮುಂಜಾನೆಯ ಪ್ರಕೃತಿಯ ವಿನೋದ ನಾದವನ್ನು ಕೇಳುತ್ತಾ ಅಪ್ಪನೊಂದಿಗೆ ತೋಟಕ್ಕೆ ಬಂದೇಬಿಟ್ಟರು. ಸುತ್ತಲೂ ಕಣ್ಣು ಹಾಯಿಸುತ್ತಿರುವಾಗಲೇ ಚಂದನ್ ಮತ್ತು ಚಂದ್ರಿಕಾಳ ಕಣ್ಣು ಒಂದು ಪುಟ್ಟ ಗಿಳಿ ಮರಿಯೊಂದರ ಮೇಲೆ ಬಿದ್ದಿತು. ಆಸೆ ತಾಳಲಾರದೆ ಪುಟ್ಟ ಚಂದ್ರಿಕಾ, ಈ ಗಿಳಿ ಮರಿಯನ್ನು ಮನೆಗೆ ತೆಗೆದುಕೊಂಡು ಹೋಗಿ ಸಾಕಲೇಬೇಕೆಂದು ಹಟ ಹಿಡಿದಳು. ಅಪ್ಪನೋ, ಮಗಳ ಮೇಲಿನ ಅತಿಯಾದ ಪ್ರೀತಿಯಿಂದಾಗಿ ಹರಸಾಹಸಪಟ್ಟು ಗಿಳಿ ಮರಿಯನ್ನು ಹಿಡಿದೇಬಿಟ್ಟರು. ಜತನದಿಂದ ಆ ಗಿಳಿ ಮರಿಯನ್ನು ಮನೆಗೆ ತೆಗೆದುಕೊಂಡು ಹೋಗಿ, ಅದಕ್ಕೊಂದು ಪಂಜರದ ವ್ಯವಸ್ಥೆಯನ್ನು ಕೂಡ ಮಾಡಿದರು.

ಅಮ್ಮನಿಗೋ, ಗಿಳಿ ಮರಿಯನ್ನು ಪಂಜರದಲ್ಲಿಡಲು ಇಷ್ಟವಿರಲಿಲ್ಲ. ಮಕ್ಕಳಿಗೆ ಎಷ್ಟೇ ಬುದ್ಧಿಮಾತನ್ನು ಹೇಳಿದರೂ ಕೂಡ ಕೇಳುವ ಪರಿಸ್ಥಿತಿಯಲ್ಲಿ ಮಕ್ಕಳಿರಲಿಲ್ಲ. ಗಿಳಿ ಮರಿಯೊಂದಿಗೆ ಆಟವಾಡುವ ಮಕ್ಕಳ ಖುಷಿಗೆ ಪಾರವೇ ಇರಲಿಲ್ಲ. ಗಿಳಿಮರಿಗೆ ಹೊತ್ತು ಹೊತ್ತಿಗೆ ತುತ್ತನಿತ್ತು, ಬಹಳ ಸಂತೋಷದಿಂದ ಸಾಕುತ್ತಿದ್ದರು.

ಹೀಗೆ ವಾರ ಕಳೆಯಿತು. ಚಂದನ್ ಮತ್ತು ಚಂದ್ರಿಕಾರಿಗೆ ವಿಪರೀತ ಜ್ವರ ಬಂದಿತು. ವೈದ್ಯರ ಬಳಿ ಹೋದಾಗ ಪರೀಕ್ಷಿಸಿದ ವೈದ್ಯರು, ವಿಷಮ ಶೀತಜ್ವರ ಎಂದು ಔಷಧಗಳನ್ನು ಕೊಟ್ಟರು. 'ಮಕ್ಕಳನ್ನು ಮನೆಯಿಂದ ಹೊರಗೆ ಆಟಕ್ಕೆಂದು ಕಳುಹಿಸುವುದು ಬೇಡ. ಸ್ವಲ್ಪ ದಿನ ಅವರು ಮನೆಯಲ್ಲಿಯೇ ವಿಶ್ರಾಂತಿ ಪಡೆಯಲಿ' ಎಂದು ಸಲಹೆ ನೀಡಿದರು.

ಮನೆಗೆ ಬಂದ ಅಮ್ಮ, ಮಕ್ಕಳಿಗೆ ಹೊರಗೆ ಆಟವಾಡಲು ಬಿಡುತ್ತಿರಲಿಲ್ಲ. 'ನಿಮ್ಮ ಪ್ರೀತಿಯ ಗಿಳಿಮರಿಯೊಡನೆ ಬೇಕಿದ್ದರೆ ಆಟವಾಡಿಕೊಳ್ಳಿ' ಎಂದು ಹೇಳಿದರು. ಮಕ್ಕಳೋ ಎಷ್ಟು ದಿನ ಮನೆಯೊಳಗೆ ಗಿಳಿಮರಿಯೊಂದಿಗೆ ಆಟವಾಡಬಲ್ಲರು? ಹೀಗೆ ದಿನಗಳೆದಂತೆ, ಪ್ರೀತಿಯ ಗಿಳಿ ಮರಿಯೊಂದಿಗಿನ ಆಟವೂ ಬೇಸರವೆನಿಸತೊಡಗಿತು. ಆಗ ಅಮ್ಮ 'ನೋಡಿ ಮಕ್ಕಳೇ, ನೀವು ಒಂದೆರೆಡು ದಿನ ಮನೆಯೊಳಗೆ ಇದ್ದಾಗ ಬೇಜಾರಾಗುತ್ತದೆ ಎಂದು ಹಟ ಮಾಡುತ್ತೀರಲ್ಲ… ಈ ಗಿಳಿ ಮರಿ ಪಾಪ ಎಷ್ಟು ಸ್ವಚ್ಛಂದವಾಗಿ ಹಾರಿಕೊಂಡಿತ್ತು. ಆದರೆ ನೀವು ಅದನ್ನು ತಂದು, ಈ ಪಂಜರದೊಳಗೆ ಇಟ್ಟಿದ್ದೀರಲ್ಲಾ ಅದಕ್ಕೆ ಎಷ್ಟು ಬೇಸರವಾಗಿರಬಹುದು? ನಿಮಗೆ ನಾನೀಗ ಮನೆಯಿಂದ ಹೊರಗೆ ಆಟಾಡೋಕೆ ಬಿಟ್ಟರೆ ಎಷ್ಟು ಖುಷಿಯಾಗುತ್ತದೆಯೋ ಅಷ್ಟೇ ಖುಷಿ ನೀವು ಈ ಗಿಳಿ ಮರಿಯನ್ನ ಹೊರಗಡೆ ಬಿಟ್ಟರೆ ಅದಕ್ಕೂ ಕೂಡ ಆಗುತ್ತೆ', ಎಂದರು. ಆ ಮಕ್ಕಳಿಗೂ ಈ ಮಾತು ಸತ್ಯವೆನಿಸತೊಡಗಿತು. ತಕ್ಷಣ ಆ ಗಿಳಿ ಮರಿಯ ಪಂಜರಕ್ಕೆ ಹಾಕಿದ್ದ ಕೀಲಿಯನ್ನು ತೆಗೆದು, ಗಿಳಿ ಮರಿಯನ್ನು ಪಂಜರದಿಂದ ಹಾರಿಬಿಟ್ಟರು. ಗಿಳಿ ಮರಿಯು ಸಂತೋಷದಿಂದ ಆಕಾಶದಲ್ಲಿ ಹಾರಿಹೋಯಿತು. ಇತ್ತ ಮಕ್ಕಳಿಗೂ ಗಿಳಿಮರಿಯ ಹಾರಾಟ ಕಂಡು ಖುಷಿಯಾಯಿತು. ■